ಮೂರ್ತೆದಾರರ ನಿರುದ್ಯೋಗದ ಬಗ್ಗೆ

1765. ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೇಂದಿ ಮಾರಾಟ ರದ್ದತಿಯಿಂದ ರಾಜ್ಯದಲ್ಲಿ ಎಷ್ಟು ಜನ ಮೂರ್ತೆದಾರರು ಉದ್ಯೋಗ ಕಳೆದುಕೊಂಡಿರುವರು?

ಆ) ಮೂರ್ತೆ ಕಳೆದುಕೊಂಡ ಈ ಮೂರ್ತೆದಾರರಿಗೆ ಯಾವ ಬದಲಿ ಉದ್ಯೋಗ ಒದಗಿಸಲಾಗಿದೆ?

ಇ) ಈ ಉದ್ಯೋಗ ಹೀನ ಮೂರ್ತಿದಾರರು ಯಾವ ಕೇಳಿಕೆಯನ್ನು ಸರ್ಕಾರಕ್ಕೆ ಒಪ್ಪಿಸಿರುವರು?

ಈ) ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮೂರ್ತೆದಾರರಿಗೆ ಬದಲಿ ಉದ್ಯೋಗ ಒದಗಿಸುವ ಸಮಿತಿ ನೇಮಿಸಿರುವುದು ಎಷ್ಟರತನಕ ಫಲಕಾರಿಯಾಗಿದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಸುಮಾರು 10.468.

ಆ) ಉದ್ಯೋಗ ಕಳೆದುಕೊಂಡ ಮೂರ್ತೆದಾರರಿಗೆ ಪುನರ್ವಸತಿ ವ್ಯವಸ್ಥೆ ಮಾಡಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಮಾಲೋಚನೆಯೊಂದಿಗೆ ಬದಲಿ ಉದ್ಯೋಗ ಕಲ್ಪಿಸಲು ಮತ್ತು ಐಆರ್‌ಡಿಪಿಯಡಿಯಲ್ಲಿ ಇತರೆ ಸುಧಾರಣ ಯೋಜನೆಯಲ್ಲಿರುವ ಉಪಯೋಗವನ್ನು ಕಲ್ಪಿಸಲು ಜಿಲ್ಲಾ ಡೆಪ್ಯುಟಿ ಕಮಿಷನರುಗಳ ನಿರ್ದೇಶಿಸಲಾಗಿದೆ.

ಇ) ಪರಿವಾರ ಕೇಳಿದ್ದಾರೆ.

ಈ) ದ.ಕ. ಜಿಲ್ಲೆಯಲ್ಲಿ ಶೇಂದಿ ಮಾರಾಟಕ್ಕಾಗಿ ಮೂರ್ತೆದಾರರ ಸಹಕಾರ ಸಂಘಗಳನ್ನು ನೋಂದಾಯಿಸಲು ಸರ್ಕಾರ ಅನುಮತಿ ನೀಡಿದೆ. ಈವರೆವಿಗೆ 32 ಸಂಘಗಳ ನೋಂದಣಿ ಆಗಿದ್ದು ಆದರಲ್ಲಿ 16 ಸಂಘಗಳಿಗೆ ಅಬಕಾರಿ ಇಲಾಖೆಯಿಂದ ಶೇಂದಿ ಇಳಿಸಲು ಹಾಗೂ ಮಾರಾಟ ಮಾಡಲು ಪರವಾನಗಿ ನೀಡಲಾಗಿದೆ. ಈ ಸಂಘಗಳು ಗಳಿಸುವ ಲಾಭವು ಸಂಘದ ಸದಸ್ಯರಾದ ಮೂರ್ತೆದಾರರಿಗೆ ಸಲ್ಲುವುದು. ಇನ್ನೂ ಉಳಿದ ಭಾಗಗಳಲ್ಲಿ ಸಂಘಗಳನ್ನು ನೋಂದಾಯಿಸುವ ಕಾರ್ಯ ರಾಜ್ಯ ಹೈಕೋರ್ಟಿನ ತಡೆಯಾಜ್ಞೆ ಇರುವುದರಿಂದ ಸ್ಥಗಿತವಾಗಿದೆ.

ಗೌರಿಬಿದನೂರ್ ತಾಲ್ಲೂಕಿನಲ್ಲಿ ಹೆಂಡದ ಮಾರಾಟ

1329. ಶ್ರೀ ಟಿ.ಜಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಾದ್ಯಂತ ಹೆಂಡ ಮಾರಾಟ ನಿಷೇಧವಿದ್ದು ಪಾವಗಡ ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿ ಬಹಿರಂಗವಾಗಿ ಹೆಂಡ ಮಾರಾಟ ಮಾಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?